## ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಛೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**

1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ನಂ.ಎಫ್. 15-2 : 2015 - ಟಿಎಸ್.IV/809/17 (ಜನರಲ್, ಎಸ್‌ಸಿ, ಎಸ್‌ಟಿ) ದಿನಾಂಕ: 21-03-2017.
2. ಈ ಕಛೇರಿ ಪತ್ರ ಸಂಖ್ಯೆ: ಡಿಟಿಇ 33 ಬಿಎಲ್‌ಡಿ 2011 ದಿನಾಂಕ:16-06-2017.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 25 ಹೆಚ್‌ಪಿಟಿ 2017 ದಿನಾಂಕ:06-07-2017.
4. ಈ ಕಛೇರಿ ಪತ್ರ ಸಂಖ್ಯೆ: ಡಿಟಿಇ 33 ಬಿಎಲ್‌ಡಿ 2011 ದಿನಾಂಕ:07-07-2017.
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಕಛೇರಿ ಆದೇಶ ಸಂಖ್ಯೆ: ಕಾಶಿಇ/37/ತಾಂ.ಶಿ.ಇ/ಸರ್ಕಾರಿ ಪಾಲಿಟೆಕ್ನಿಕ್/ರೂಸ/ಅನುದಾನ/2016-17 ದಿನಾಂಕ:05-08-2017.

**ಪ್ರಸ್ತಾವನೆ :**

ಉಲ್ಲೇಖ (1) ರ ಪತ್ರದಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ, ಚಿಂತಾಮಣಿ, ಹಾನಗಲ್, ಗದಗ, ಮಿರ್ಲೆ, ಉಡುಪಿ ಮತ್ತು ಡಿ.ಆರ್.ಆರ್ (ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಕ್ರಮವಾಗಿ ರೂ.9,31,234/- ರೂ. 7,81,877/-, ರೂ. 9,49,364/-, ರೂ.9,68,697/-, ರೂ.9,12,596/-, ರೂ.9,72,396/- ಮತ್ತು ರೂ.8,75,151/- ಗಳಂತೆ ಹೀಗೆ ಒಟ್ಟು ರೂ.63,91,315.00/- ಗಳನ್ನು ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಯೋಜನೆಯಡಿಯಲ್ಲಿ ಸಂಬಂಧಪಟ್ಟ ರಾಜ್ಯಗಳ ಆರ್ಥಿಕ ಇಲಾಖೆಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಉಲ್ಲೇಖ (2) ರ ಈ ಕಛೇರಿಯ ಪತ್ರಗಳಲ್ಲಿ ಮೇಲೆ ಸೂಚಿಸಿರುವ ಅನುದಾನವನ್ನು ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಲೆಕ್ಕ ಶೀರ್ಷಿಕೆ: 4202-01-203-1-11-059-ಯೋಜನೆಯಡಿಯಲ್ಲಿ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಉಲ್ಲೇಖ (3) ರ ಸರ್ಕಾರಿ ಆದೇಶದಲ್ಲಿ 2017-18ನೇ ಸಾಲಿನ ಆಯವ್ಯಯದ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059-ಯಡಿ ಒದಗಿಸಿರುವ ಅನುದಾನದಲ್ಲಿ ಈ ಕೆಳಕಂಡ 07 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮೂರನೇ ಕಂತಿನ ಅನುದಾನ ಒಟ್ಟು ರೂ.63,91,315.00 ಗಳನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಅನುಮತಿ ನೀಡಲಾಗಿದೆ ಎಂದು ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಸಂಸ್ಥೆಯ ಹೆಸರು | ಒಟ್ಟು |
|---|---|---|
| 1 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ. | 9,31,234.00 |
| 2 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. | 7,81,877.00 |
| 3 | ಡಿಆರ್‌ಆರ್(ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ. | 8,75,151.00 |
| 4 | ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್. | 9,49,364.00 |
| 5 | ಸರ್ಕಾರಿ ಪಾಲಿಟೆಕ್ನಿಕ್,ಗದಗ್. | 9,68,697.00 |
| 6 | ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | 9,12,596.00 |
| 7 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ | 9,72,396.00 |
| | ಒಟ್ಟು | 63,91,315.00 |

ಉಲ್ಲೇಖ (4) ರ ಈ ಕಛೇರಿಯ ಪತ್ರದಲ್ಲಿ 2017-18ನೇ ಸಾಲಿನ ಆಯವ್ಯಯದ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059-ಯಡಿ ಒದಗಿಸಿರುವ ಅನುದಾನದಲ್ಲಿ ಈ ಮೇಲ್ಕಂಡ 07 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮೂರನೇ ಕಂತಿನ ಅನುದಾನ ಒಟ್ಟು ರೂ.63,91,315.00 ಗಳನ್ನು ಬಿಡುಗಡೆ ಮಾಡಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಖಜಾನೆ-2 ಡಿ.ಡಿ.ಓ ಕೋಡ್ 142540 ಗೆ ಅಪ್‌ಲೋಡ್ ಮಾಡಲು ಕೋರಲಾಗಿತ್ತು.

ಅದರಂತೆ, ಉಲ್ಲೇಖ (5) ಆದೇಶದಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059 (ಸಾಮಾನ್ಯ) ರಡಿಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ, ಚಿಂತಾಮಣಿ, ಹಾನಗಲ್, ಗದಗ, ಮಿರ್ಲೆ, ಉಡುಪಿ ಮತ್ತು ಡಿ.ಆರ್.ಆರ್ (ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕಾಗಿ ಕ್ರಮವಾಗಿ ರೂ.9,31,234/- ರೂ. 7,81,877/-, ರೂ. 9,49,364/-, ರೂ.9,68,697/-, ರೂ.9,12,596/-, ರೂ.9,72,396/- ಮತ್ತು ರೂ.8,75,151/- ಗಳಂತೆ ಹೀಗೆ ಒಟ್ಟು ರೂ.63,91,315.00/- ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ನಿಯಮಾನುಸಾರ ಖರ್ಚು ಮಾಡಲು ಬಿಡುಗಡೆ ಮಾಡಿ ಆದೇಶಿಸಲಾಗಿದೆ. ಅದರಂತೆ ಈ ಆದೇಶ.

**ಆದೇಶ ಸಂಖ್ಯೆ: ಡಿಟಿಇ 33 ಬಿಎಲ್‌ಡಿ 2011 ಬೆಂಗಳೂರು, ದಿನಾಂಕ: 23-08-2017**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕೇಂದ್ರ ಸರ್ಕಾರದ ಧನಸಹಾಯ ಯೋಜನೆಯಡಿ ಈ ಕೆಳಕಂಡ 07 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ 2017-18ನೇ ಸಾಲಿನ ಆಯವ್ಯಯದ ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 4202-01-203-1-11-059-ಯಡಿ ಮೂರನೇ ಕಂತಿನ ಅನುದಾನ ಒಟ್ಟು ರೂ.63,91,315.00/- (ರೂಪಾಯಿ ಅರವತ್ತ್ಮೂರು ಲಕ್ಷದ ತೊಂಭತ್ತೊಂದು ಸಾವಿರದ ಮೂರು ನೂರಾ ಹದಿನೈದು) ಗಳನ್ನು ಮಾತ್ರ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಸಂಸ್ಥೆಯ ಹೆಸರು | ಒಟ್ಟು |
|---|---|---|
| 1 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ. | 9,31,234.00 |
| 2 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ. | 7,81,877.00 |
| 3 | ಡಿಆರ್‌ಆರ್(ಸರ್ಕಾರಿ) ಪಾಲಿಟೆಕ್ನಿಕ್, ದಾವಣಗೆರೆ. | 8,75,151.00 |
| 4 | ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್. | 9,49,364.00 |
| 5 | ಸರ್ಕಾರಿ ಪಾಲಿಟೆಕ್ನಿಕ್,ಗದಗ್. | 9,68,697.00 |
| 6 | ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ. | 9,12,596.00 |
| 7 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ | 9,72,396.00 |
| ಒಟ್ಟು | | 63,91,315.00 |

ಸದರಿ ಅನುದಾನವನ್ನು "ಅನುದಾನಿತ ಬಿಲ್ಲಿನ ಮೂಲಕ" - ಸಿಟಿಎಸ್ 8 ಮೂಲಕ ಡ್ರಾ ಮಾಡಲು ಸಹ ಖಜಾನೆ -2 (ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆ) ಮೂಲಕ ಸಂಬಂಧಪಟ್ಟ ಪ್ರಿನ್ಸಿಪಾಲರ ಹೆಸರಿನಲ್ಲಿ ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಗದು ಶಾಖೆಗೆ ಆದೇಶಿಸಲಾಗಿದೆ.

ನಿರ್ದೇಶಕರು

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001.

ಇವರಿಗೆ:

1. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು ಮಾಹಿತಿಗಾಗಿ.
2. ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು – ಮಾಹಿತಿಗಾಗಿ.
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಇ-ಆಡಳಿತ ವಿಭಾಗ - ಡಿಟಿಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಮಾಹಿತಿಗಾಗಿ.